ಟಿಪ್ಪಣಿ ಹಾಳೆ

ವಿಷಯ ಬಿಲ್ಲು ಅಪಚಾರುವ ಬಗ್ಗೆ ಪುಟದ ಸಂಖ್ಯೆ 1

ಕಡತದ ಸಂಖ್ಯೆ ಕಾ.ಅ/ಯಲ/ಪಿ:ಕಾ/100/18-19

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ:

01) ಮಾನ್ಯ ಆಯುಕ್ತರು ರವರ ಆದೇಶ ಸಂಖ್ಯೆ: ಆಯುಕ್ತರು/ಪಿಆರ್/186/15-16 ದಿ:06/5/2015, ದಿ:12/06/2015 ಹಾಗೂ ದಿ:02.07.2015 ಮತ್ತು ಆದೇಶ ಸಂಖ್ಯೆ: ಮುಲೆಅ/ಪಿಆರ್/4415/2015-16 ದಿ:30/11/2015 ರಲ್ಲಿ ಎಲ್ಲಾ ಕಾಮಗಾರಿ ಬಿಲ್ಲುಗಳನ್ನು ಅನ್‌ಲೈನ್ ಮುಖಾಂತರ ಸಲ್ಲಿಸಲು ಆದೇಶಿಸಿರುತ್ತಾರೆ.

02) ಆದ್ದುದರಿಂದ, 2017-18ನೇ ಸಾಲಿನ **P3112** ಸ್ವಚ್ಛ ಭಾರತ್ ಅಭಿಯಾನ ಅನುದಾನದಡಿಯಲ್ಲಿ ಯಲಹಂಕ ವಲಯಕ್ಕೆ ಸಂಬಂಧಿಸಿದಂತೆ **M/s Sathya Constructions (Prop of R.Satheesh)**ಬೆಂಗಳೂರು ಇವರು ನಿರ್ವಹಿಸಿರುವ ಕಾಮಗಾರಿ **"Package-7 Improvement of roads for Layout where the Cauvery UGDWork are in progress in Ward.05 and Ward No.06 Byatarayanapura Sub Division"** ಜಾಬ್ ನಂ: 005-18-000043ನ ಬಿಲ್ಲಿನ ಮೊತ್ತ ರೂ. 2,82,78,132/-ಗಳಿಗೆ ಒಂದನೇ ಹಾಗೂ ಭಾಗಶಃ ಬಿಲ್ಲನ್ನು ಬಿ.ಆರ್ ಸಂಖ್ಯೆ:000046/18-19 ದಿನಾಂಕ: 08-06-2018ರಲ್ಲಿ ಸ್ವೀಕರಿಸಲಾಗಿದೆ.

03) ಸದರಿ ಕಾಮಗಾರಿಯ ಬಿಲ್‌ನ್ನು ಪಾವತಿಗೆ ಸ.ಕಾ.ಪಾ.ಅ(ಯೋ) ರವರು ಸಲ್ಲಿಸಿರುವ ಮೇರೆಗೆ ಗುತ್ತಿಗೆದಾರರ ಖಾತೆಗೆ ಆನ್‌ಲೈನ್ ಮುಖಾಂತರ ಪಾವತಿಗಾಗಿ ಅಪ್‌ಲೋಡ್ ಮಾಡಲು ಹಾಗೂ CBR ಸಂಖ್ಯೆ ನಮೂದಿಸಲು ಕೇಂದ್ರ ಕಛೇರಿಗೆ ಸಲ್ಲಿಸಲು ಆದೇಶ ಕೋರಿ ಮಂಡಿಸಿದೆ.

ಒಂದನೇ ಹಾಗೂ ಭಾಗಶಃ ಬಿಲ್ ಬಿ.ಆರ್ ಸಂಖ್ಯೆ:000046/18-19 ದಿನಾಂಕ:08-06-2018

ಬಿಲ್ಲಿನ ಮೊತ್ತ:	ರೂ. 2,82,78,132/-.
ಶಾಸನೀಯ ಕಟಾವಣೆ	ರೂ. 9,61,456/-
ನಿವ್ವಳ ಮೊತ್ತ	ರೂ. 2,73,16,676/-

ಕಾರ್ಯಪಾಲಕ ಅಭಿಯಂತರರು, 25/6/18
ಯೋಜನಾ ವಿಭಾಗ, ಯಲಹಂಕ ವಲಯ.
ಬಿಬಿಎಂಪಿ, ಬೆಂಗಳೂರು-92.

04) ಮುಖ್ಯ ಲೆಕ್ಕಾಧಿಕಾರಿಗಳು 25/6/18

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಅಜ್ಞೆಗಳು

5

- ಕಂಡಿಕೆ (1) ರಿಂದ (3) ರಲ್ಲಿನ ಕಾ.ಪಾ.ಅ. (ಯೋಜನೆ–ಯಲಹಂಕ)ರವರು ಪಾವತಿಗೆ ಕೋರಿರುವ ಜಾಬ್ ಸಂ:005–18–000043 ರ ಬಿ.ಆರ್.ಸಂ:46/08–06–2018 ಆಗಿದ್ದು, ಮೊದಲನೇ ಹಾಗೂ ಅಂತಿಮ ಬಿಲ್ಲಿನ ಮೊತ್ತ ರೂ.2,82,78,132/–ಗಳಾಗಿದ್ದು, ಸದರಿ ಕಾಮಗಾರಿಗೆ ಸ್ವಚ್ಛಭಾರತ ಅಭಿಯಾನ ಯೋಜನೆಯ ಅನುದಾನದಡಿ ಈ ಹಿಂದೆ ಜಾಬ್ ಕೋಡ್ ನೀಡಲಾಗಿರುತ್ತದೆ. ಸದರಿ ಅನುದಾನದ ಪ್ರಸ್ತುತ ವಿವರಗಳು ಈ ಕೆಳಕಂಡಂತಿವೆ :

Swacha Bharatha Grants Status

ಕ್ರ.ಸಂ.	ವಿವರ	ಮೊತ್ತ (ರೂ.ಕೋಟಿಗಳಲ್ಲಿ)
1	ಸ್ವಚ್ಛಭಾರತ ಅಡಿಯಲ್ಲಿ 2015–16 ನೇ ಸಾಲಿಗೆ ಬಿಡುಗಡೆಯಾದ ಅನುದಾನ	1.50
2	ಸ್ವಚ್ಛಭಾರತ ಅಡಿಯಲ್ಲಿ 2016–17ನೇ ಸಾಲಿಗೆ ಬಿಡುಗಡೆಯಾದ ಅನುದಾನ	41.15
3	ಒಟ್ಟು (1 + 2)	**42.65**
4	ಚಿಕ್ಕನಾಗಮಂಗಲ, ಘನತ್ಯಾಜ್ಯ ಘಟಕದ ಸುತ್ತಲಿನ ಹಳ್ಳಿಗಳ ಅಭಿವೃದ್ಧಿ ಕಾಮಗಾರಿಗಳಿಗೆ ಮಾನ್ಯ ಆಯುಕ್ತರ ಆದೇಶದಂತೆ ಪಾವತಿಯಾಗಿರುವುದು (Jobcode issued under GOK-SIP grant)	15.14
5	ಸ್ವಚ್ಛಭಾರತ ಅಭಿಯಾನದ ಅನುದಾನದಡಿ ಜಾಬ್‌ಕೋಡ್ ನೀಡಿ, ಪರಿಗಣಿಸುವ ಕಾಮಗಾರಿಗಳಿಗೆ ಲಭ್ಯವಿರುವ ಅನುದಾನ (3–4)	**27.51**
6	ಸ್ವಚ್ಛಭಾರತ ಅಭಿಯಾನದ ಅನುದಾನದಡಿ ಜಾಬ್‌ಕೋಡ್ ನೀಡಿರುವ ಮೊತ್ತ (ಮುಖ್ಯ ಆರ್ಥಿಕ ಅಧಿಕಾರಿ–ಜೆಎನ್ಎನ್ಯುಆರ್ಎಂ ರವರು ದಿನಾಂಕ:21–04–2018ರಂದು ನೀಡಿರುವ ಮಾಹಿತಿಯಂತೆ)	154.98
7	ಹೆಚ್ಚುವರಿ ಜಾಬ್ ಕೋಡ್ ನೀಡಿರುವ ಮೊತ್ತ (5–6)	(–) **127.47**

6

Swacha Bharatha Fund Position (as on 30-06-2018)

ಕ್ರ.ಸಂ.	ವಿವರ	ಮೊತ್ತ (ರೂ.ಕೋಟಿಗಳಲ್ಲಿ)
1	2015–16 ಮತ್ತು 2016–17ನೇ ಸಾಲಿಗೆ ಸರ್ಕಾರದಿಂದ ಪಾಲಿಕೆಗೆ ಸ್ವಚ್ಛಭಾರತ ಅಭಿಯಾನ ಯೋಜನೆಯಡಿ ಬಿಡುಗಡೆಯಾಗಿರುವ ಒಟ್ಟು ಅನುದಾನ	42.65
2	ಚಿಕ್ಕನಾಗಮಂಗಲ, ಘನತ್ಯಾಜ್ಯ ಘಟಕದ ಸುತ್ತಲಿನ ಹಳ್ಳಿಗಳ ಅಭಿವೃದ್ಧಿ ಕಾಮಗಾರಿಗಳಿಗೆ ಮಾನ್ಯ ಆಯುಕ್ತರ ಆದೇಶದಂತೆ ಪಾವತಿಯಾಗಿರುವುದು (Jobcode issued under GOK-SIP grant)	15.14
3	ಸ್ವಚ್ಛಭಾರತ ಅಭಿಯಾನದ ಅನುದಾನದಡಿ ಜಾಬ್‌ಕೋಡ್ ನೀಡಿ, ಪರಿಗಣಿಸುವ ಕಾಮಗಾರಿಗಳಿಗೆ ಲಭ್ಯವಿರುವ ಅನುದಾನ (1 – 2)	**27.51**
4	ಈಗಾಗಲೇ ಪಾವತಿ ಮಾಡಿರುವ ಮೊತ್ತ ಹಾಗೂ ಸ್ವಚ್ಛಭಾರತ ಅಭಿಯಾನ ಯೋಜನೆಯಡಿ ಮಾನ್ಯ ಆಯುಕ್ತರಿಂದ ಅನುಮೋದನೆಗೊಂಡು, ಪಾವತಿಗೆ ಈ ಕಛೇರಿಯಲ್ಲಿ ಬಾಕಿಯಿರುವ ಬಿಲ್ಲುಗಳ ಮೊತ್ತ	14.94
5	ಉಳಿಕೆ ಮೊತ್ತ (3 – 4)	**12.57**
6	ಸ್ವಚ್ಛಭಾರತ ಅಭಿಯಾನ ಯೋಜನೆಯಡಿ ಜಾಬ್ ಕೋಡ್ ನೀಡಿರುವ ಕಾಮಗಾರಿಗಳ ಪಾವತಿಗೆ ಬಾಕಿಯಿರುವ ಮೊತ್ತ (154.98 – 14.94)	**140.04**

7

ವಿಷಯ ಕಲ್ಲು ಗಣಿಗಾರಿಕೆಯ ಬಗ್ಗೆ. ಪುಟದ ಸಂಖ್ಯೆ -3-

ಕಡತದ ಸಂಖ್ಯೆ ಕಾಕಾಕಿ/ಯೋಜ/ಕಿ.ಕಾ/100/18-19

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
8	• ಆದರೆ, ಸ್ವಚ್ಛಭಾರತ ಅಭಿಯಾನದಡಿ ಪಾಲಿಕೆಗೆ ಬಿಡುಗಡೆಯಾಗಿರುವ ಅನುದಾನಕ್ಕೆ ಯಾವುದೇ ಅನುಮೋದಿತ ಕ್ರಿಯಾಯೋಜನೆ ಲಭ್ಯವಿರುವುದಿಲ್ಲ. ಇದರಿಂದ ಯಾವ ಯಾವ ಕಾಮಗಾರಿಗಳನ್ನು ಸ್ವಚ್ಛಭಾರತ ಅನುದಾನದಡಿ ಪಾವತಿಸಬೇಕೆಂಬ ಬಗ್ಗೆ ಸ್ಪಷ್ಟತೆ ಇರುವುದಿಲ್ಲ.
	• ಮುಂದುವರೆದಂತೆ, ದಿನಪತ್ರಿಕೆಗಳಲ್ಲಿ ಇತ್ತೀಚೆಗೆ ಪ್ರಕಟವಾದ "ಸ್ವಚ್ಛ ಭಾರತ ಅಭಿಯಾನದ ಅನುದಾನದಡಿ ಪಾವತಿಸಲಾದ ಕಾಮಗಾರಿಗಳ ಬಗೆಗಿನ ಪತ್ರಿಕಾ ವರದಿಯ" ಬಗ್ಗೆ ತಮ್ಮ ಗಮನ ಸೆಳೆಯಲಾಗಿದೆ.
9	• ಈ ಹಿನ್ನೆಲೆಯಲ್ಲಿ ಪ್ರಸ್ತುತ ಸ್ವಚ್ಛಭಾರತ ಅಭಿಯಾನ ಯೋಜನೆ ಅಡಿಯಲ್ಲಿ ಲಭ್ಯವಿರುವ ಅನುದಾನ ರೂ.12.57 ಕೋಟಿಗಳಿಂದ ಸ್ವಚ್ಛಭಾರತ ಅಭಿಯಾನ ಯೋಜನೆ ಅಡಿಯಲ್ಲಿ ಜಾಬ್ ಕೋಡ್ ನೀಡಿರುವ ಬಾಕಿ ಅನುದಾನ ರೂ.140.04 ಕೋಟಿಗಳ ಮೊತ್ತದ ಕಾಮಗಾರಿಗಳನ್ನು ಪಾವತಿಸುವುದು ಕಷ್ಟಸಾಧ್ಯವಾಗಿರುತ್ತದೆ. ಅದರಲ್ಲೂ, ಹೆಚ್ಚುವರಿ ಜಾಬ್ ಸಂಖ್ಯೆ ನೀಡಿರುವ ಕಾಮಗಾರಿಗಳ ಬಿಲ್‌ಗಳನ್ನು ಈ ಅನುದಾನದಡಿಯಲ್ಲಿ ಪಾವತಿಸಲು ಸಾಧ್ಯವಿರುವುದಿಲ್ಲ.
10	• ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸ್ವಚ್ಛಭಾರತ ಅಭಿಯಾನದಡಿ ಪಾಲಿಕೆಗೆ ಬಿಡುಗಡೆಯಾಗಿರುವ ಅನುದಾನಕ್ಕೆ ಜಂಟಿ ಆಯುಕ್ತರು (ಘ.ತ್ಯಾ.ನಿ)ರವರ ಶಿಫಾರಸ್ಸಿನ ಮೇರೆಗೆ ಮಾನ್ಯ ಆಯುಕ್ತರಿಂದ ಅನುಮೋದಿತಗೊಂಡು ಈಗಾಗಲೇ ಪಾವತಿ ಮಾಡಿರುವ ಅರ್ಹ ಕಾಮಗಾರಿಗಳನ್ನೊಳಗೊಂಡಂತೆ, ಇನ್ನುಳಿದ ಅರ್ಹ ಕಾಮಗಾರಿಗಳಿಗೆ ಒಂದು ಸ್ಪಷ್ಟ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ, ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯುವ ಅಗತ್ಯತೆ ಇರುತ್ತದೆ.
	• ಮೇಲ್ಕಂಡ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ, ಈ ಬಗ್ಗೆ ಮುಂದಿನ ಕ್ರಮಕ್ಕಾಗಿ ಕಡತ ಸಲ್ಲಿಸಿದೆ.
	ಮುಖ್ಯ ಲೆಕ್ಕಾಧಿಕಾರಿಗಳು
11	ಜಂಟಿ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ)
	ಕಾರ್ಯಪಾಲಕ ಅಭಿಯಂತರರು(ಯೋಜನೆ) ಯಲಹಂಕ ವಲಯ ರವರಲ್ಲಿ ಚರ್ಚಿಸಲಾಯಿತು ದಿನಾಂಕ:01-04-2016ರಿಂದ ಬೆಳ್ಳಹಳ್ಳಿ ಕಲ್ಲು ಕ್ವಾರಿಯಲ್ಲಿ ಘನತ್ಯಾಜ್ಯಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತಿದ್ದು, ಈ ಕಲ್ಲು ಗಣಿಗಳ ಸುತ್ತ ಮುತ್ತಲಿನ ಪ್ರದೇಶಗಳು ಹಾಗೂ ಹಳ್ಳಿಗಳ ಸಾರ್ವಜನಿಕರು ಘಟಕಗಳ ಕಾರಣದಿಂದ ವಾಸನೆ ನೊಣ ಮತ್ತು ಸೊಳ್ಳೆಗಳ ಹಾವಳಿ ಜಾಸ್ತಿ ಉಂಟಾಗಿರುವುದರಿಂದ ಈ ಪ್ರದೇಶದಲ್ಲಿ ಮೂಲಭೂತಸೌಕರ್ಯಗಳಾದ ಕುಡಿಯುವ ನೀರು, ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕೈಗೊಳ್ಳಲು ಕೋರಿರುವಂತೆ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಶಾಸಕರು ಮತ್ತು ಕೃಷಿ ಸಚಿವರು ರವರು ಬೆಳ್ಳಹಳ್ಳಿ ಮತ್ತು ಬಾಗಲೂರು ವೈಜ್ಞಾನಿಕ ವಿಲೇವಾರಿ ಘಟಕದ ವ್ಯಾಪ್ತಿಯಲ್ಲಿ ಒಟ್ಟು 65 ಕಾಮಗಾರಿಗಳು ಒಟ್ಟು ರೂ.3000.00 ಲಕ್ಷಗಳು ಪತ್ರ ಸಂಖ್ಯೆ: ಕೃಷ/ಗೃಕ/446/2017–18 ದಿನಾಂಕ:10–08–2017ರಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳನ್ನು ಸ್ವಚ್ಛ ಭಾರತ್ ಅನುದಾನದಡಿಯಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕಗಳ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ತುರ್ತಾಗಿ ಆಗ್ಗಿಂದಾಗೆ ಕೈಗೊಳ್ಳಬಹುದಾದ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನವನ್ನು ಮೀಸಲಿರಿಸಿಕೊಂಡು ತುರ್ತು ಸಂದರ್ಭಗಳಲ್ಲಿ ಕೈಗೊಳ್ಳಬೇಕಾಗಿರುವುದರಿಂದ ಕ್ರಿಯಾ ಯೋಜನೆಗೆ ಅನುಮೋದನೆಯನ್ನು ಪಡೆಯಲಾಗಿರುವುದಿಲ್ಲ ಈ ಕಾಮಗಾರಿಗಳನ್ನು ತುರ್ತು ಸಂಧರ್ಭದಲ್ಲಿ ಮಾನ್ಯ ಆಯುಕ್ತರವರ ಅನುಮೋದನೆಯೊಂದಿಗೆ ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿ ಘಟಕಗಳ ಸುತ್ತ ಮುತ್ತ ಪ್ರದೇಶ ಹಾಗೂ ಹಳ್ಳಿಗಳಲ್ಲಿ ಸಾರ್ವಜನಿಕ ಆರೋಗ್ಯ ಹಾಗೂ ಸೇವಾ ಹಿತದೃಷ್ಟಿಯಿಂದ ಸದರಿ ಕಾಮಗಾರಿಗಳನ್ನು ಲೆಕ್ಕ ಶೀರ್ಷಿಕೆ ಪಿ–3112 (ಸ್ವಚ್ಛ ಭಾರತ್ ಅಭಿಯಾನ) ಅನುದಾನದಡಿಯಲ್ಲಿ ಜಾಬ್ ಸಂಖ್ಯೆಗಳನ್ನು ನೀಡಲಾಗಿದ್ದು, ಕಾಮಗಾರಿಗಳನ್ನು ಟೆಂಡರ್ ಮೂಲಕ ಗುತ್ತಿಗೆದಾರರ ಮುಖಾಂತರ ನಿರ್ವಹಿಸಲಾಗಿರುತ್ತದೆ. ಸದರಿ ಕಾಮಗಾರಿಗಳನ್ನು ಬೆಳ್ಳಹಳ್ಳಿ ಮತ್ತು ಬಾಗಲೂರು ಕಲ್ಲು ಗಣಿಗಳ ವೈಜ್ಞಾನಿಕ ವಿಲೇವಾರಿ ಘಟಕಗಳ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಮೂಲಭೂತಸೌಕರ್ಯಗಳನ್ನು ಒದಗಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸ್ವಚ್ಛತೆ, ಘನತ್ಯಾಜ್ಯ ವಿಲೇವಾರಿ ಸುಗಮವಾಗಿ ನಡೆಯಲು ಸ್ವಚ್ಛತೆಯ ದೃಷ್ಟಿಯಿಂದ ಸಾರ್ವಜನಿಕರ ಸೇವಾ ಹಾಗೂ ಆರೋಗ್ಯ ಹಿತದೃಷ್ಟಿಯಿಂದ ಕೈಗೊಂಡಿರುವುದರಿಂದ ಸ್ವಚ್ಛ ಭಾರತ್ ಅಭಿಯಾನ ಅನುದಾನದಡಿಯಲ್ಲಿ ಬಿಲ್ ಮೊತ್ತವನ್ನು ಪಾವತಿಸಲು ಅನುಮೋದನೆಯನ್ನು ನೀಡಬಹುದಾಗಿದ್ದು, ಮುಂದಿನ ಆದೇಶಕ್ಕಾಗಿ ಸಲ್ಲಿಸಿದೆ.

ಜಂಟಿ ಆಯುಕ್ತರು(ಆ&ಘ.ತ್ಯಾ.ನಿ)

-12- ಮಾನ್ಯ ಆಯುಕ್ತರು

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
13	ಸನ್ಮಾನ್ಯ ಮುಖ್ಯ ಮಂತ್ರಿಗಳ ಆದೇಶದಂತೆ ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ ಗ್ರಾಮದ Terrafarm ಅನ್ನು ಅಲ್ಲಿನ ಸಾರ್ವಜನಿಕ ಪ್ರತಿರೋಧ ಮತ್ತು ಪ್ರತಿಭಟನೆಗಳಿಂದ ದಿನಾಂಕ:31–03–2016ಕ್ಕೆ ಘನತ್ಯಾಜ್ಯ ವಿಲೇವಾರಿ ಘಟಕವನ್ನು ಮುಚ್ಚಿ ದಿನಾಂಕ: 01–04–2016ರಿಂದ ಬೆಳ್ಳಹಳ್ಳಿ ಮತ್ತು ಬಾಗಲೂರು ಗ್ರಾಮಗಳ ಶಿಥಿಲಗೊಂಡ (Abundent) ಕಲ್ಲುಗಣಿಗಳಲ್ಲಿ ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿ ಘಟಕಗಳನ್ನು ಪ್ರಾರಂಭ ಮಾಡಲಾಗಿದ್ದು, ಅಲ್ಲಿನ ಘಟಕಗಳ ಸುತ್ತಮುತ್ತಲಿನ ಪ್ರದೇಶ ಮತ್ತು ಹಳ್ಳಿಗಳ ಸಾರ್ವಜನಿಕರು ಘಟಕಗಳಿಂದ ಹೊರ ಸೂಸುವ ವಾಸನೆಯಿಂದ ಘನತ್ಯಾಜ್ಯ ವಿಲೇವಾರಿ ಘಟಕವನ್ನು ಸ್ಥಗಿತಗೊಳಿಸುವಂತೆ ಪ್ರತಿಭಟನೆಗಳನ್ನು ಮಾಡಲಾಗುತ್ತಿದ್ದ ಸಮಯದಲ್ಲಿ ಈ ಬಗ್ಗೆ ಸ್ಥಳೀಯ ಶಾಸಕರು ಹಾಗೂ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಮತ್ತು ಸದಸ್ಯರೊಂದಿಗೆ ಸಮಾಲೋಚನೆ ನಡೆಸಿ ಘಟಕಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ರಸ್ತೆ ಮತ್ತು ಚರಂಡಿ ನಿರ್ಮಾಣ ಕೆಲಸವನ್ನು ಸಾರ್ವಜನಿಕರ ಸೇವಾ ಹಾಗೂ ಆರೋಗ್ಯದ ದೃಷ್ಟಿಯಿಂದ ಕೈಗೊಳ್ಳುವಂತೆ ಕೋರಿರುತ್ತಾರೆ.
14	ಸಾರ್ವಜನಿಕ ಸೇವಾ ಹಾಗೂ ಆರೋಗ್ಯ ಹಿತದೃಷ್ಟಿಯಿಂದ ಬೆಳ್ಳಹಳ್ಳಿ, ಬಾಗಲೂರು ಮತ್ತು ಮಿಟ್ಟಗಾನಹಳ್ಳಿ ಕಲ್ಲುಗಣಿಗಳ ಘನತ್ಯಾಜ್ಯ ವಿಲೇವಾರಿ ಘಟಕಗಳ ಸುತ್ತಮುತ್ತಲಿನ ಹಳ್ಳಿ ಮತ್ತು ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯ ಕಾಮಗಾರಿಗಳಾದ ಕುಡಿಯುವ ನೀರು, ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳನ್ನು ಸ್ವಚ್ಛ ಭಾರತ್ ಅಭಿಯಾನ ಅನುದಾದಡಿಯಲ್ಲಿ ಕಾಲಕಾಲಕ್ಕೆ ಘನತ್ಯಾಜ್ಯ ವಿಲೇವಾರಿ ಘಟಕಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಭಿವೃದ್ಧಿ ಮತ್ತು ತುರ್ತು ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನವನ್ನು ಮೀಸಲಿರಿಸಿಕೊಂಡು ಪ್ರಸ್ತಾಪಿಸಿರುವ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆಯನ್ನು ಮಾನ್ಯ ಆಯುಕ್ತರವರು ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಮೂಲ ಕಡತದಲ್ಲಿ ನೀಡಿರುವಂತೆ ಕಾಮಗಾರಿಗಳಿಗೆ ಕಾಮಗಾರಿ ಸಂಕೇತಗಳನ್ನು ನೀಡಲಾಗಿರುತ್ತದೆ.
15	ಸದರಿ ಕಾಮಗಾರಿಗಳನ್ನು ಟೆಂಡರ್ ಮೂಲಕ ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಸದರಿ ಕಾಮಗಾರಿಗಳನ್ನು ಬೆಳ್ಳಹಳ್ಳಿ ಮತ್ತು ಬಾಗಲೂರು ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿ ಘಟಕಗಳ ಸುತ್ತಮುತ್ತಲಿನ ಪ್ರದೇಶ ಮತ್ತು ಹಳ್ಳಿಗಳಲ್ಲಿ ಸಾರ್ವಜನಿಕ ಸೇವಾ ಹಾಗೂ ಆರೋಗ್ಯ ಹಿತದೃಷ್ಟಿಯಿಂದ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗಳನ್ನು ಕೈಗೊಂಡಿದ್ದು, ಸದರಿ ಕಾಮಗಾರಿಯನ್ನು ನಿರ್ವಹಿಸಿರುವ ಗುತ್ತಿಗೆದಾರರು ಆರ್ಥಿಕವಾಗಿ ಸಂಕಷ್ಟದಲ್ಲಿರುವುದರಿಂದ ಸದರಿ ~~ಕಾಮಗಾರಿಯನ್ನು Commissioner Order~~ Category ಅಡಿಯಲ್ಲಿ ಪಾವತಿ ಮಾಡಲು ಅನುಮೋದನೆಗಾಗಿ ಸಲ್ಲಿಸಿದೆ. ಜಂಟಿ ಆಯುಕ್ತರು(ಫ.ತ್ಯಾ.ನಿ)
16	ಮಾನ್ಯ ಆಯುಕ್ತರು For necessary action in this regard (15)
17	CAO

ಹಾಗೂ ಮುಖ್ಯ ಲೆಕ್ಕಪರಿಶೋಧಕರವರ ಆದೇಶದಂತೆ
ಹಾಗೂ ಮುಖ್ಯ ಲೆಕ್ಕಾಧಿಕಾರಿಯವರ ಮೇರೆಗೆ ಆದೇಶದಂತೆ
ಇವರ ಕಾಮಗಾರಿಯನ್ನು commissioner order ಆದಲು ಬಾಕಿಯಿದ್ದು
ಅವಿ ಮಾಡಿಸಿ ಮೇ: ಮಲ್ಲಿಕ್ ಕಾರ್ಪೊರೇಷನ್ ಸೆಲ್ಯುಷಿನ್ಸ್
ಪ್ರೈ.ಲಿ., ಕವರಿನ ವಿದ್ಯುತ್ ಪರಿವೀಕ್ಷಣಾ ವರದಿಯನ್ನು ತಮ್ಮ ಪರಿಶೀಲನೆಗಾಗಿ
ಸಲ್ಲಿಸಿದೆ. A16/x

18 ಪರಿಶೀಲನೆ (ಅನುಮೋದನೆ)

19) ~~ಅಧೀಕ್ಷಕ~~ ಮುಖ್ಯ ಕಾರ್ಯಪಾಲಕ ಎಂಜಿನಿಯರ್ (14) ರವರ ಕಛೇರಿಯ
ಸೀನಿಯರ್ ಸೂಪರಿಂಟೆಂಡೆಂಟ್ ಪರಿಶೀಲನೆಗಾಗಿ ಇದನ್ನು
ಕಳುಹಿಸಲಾಗಿದೆ. ಫ 16/10/14.

20) ಸೀ.ಎ.ಸೂ/ಬಿ. 16/10/14.
ವಿಶೇಷ ಅಯುಕ್ತರು (ಪೂರ್ವ ವಲಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

21) ~~CA2~~ ಫ